ನಿಮ್ಮೊಡನೆ

# ಶಾಲಾ ಮಕ್ಕಳ 'ಭಾರ'ದ ಬ್ಯಾಗ್ ತೆರೆದುಕೊಂಡಾಗ ನಮಗೆ ಕಾಣಿಸಿದ್ದೇನು? ಕಾಣಿಸಬೇಕಾದುದೇನು?

ದೈಹಿಕ ಹಾಗೂ ಮಾನಸಿಕ ಬೆಳವಣಿಗೆಗಳನ್ನು ಮಕ್ಕಳಿಗೆ ವೈಜ್ಞಾನಿಕವಾಗಿ ತಿಳಿಹೇಳಿದರೆ ಅವರು ಗೊಂದಲಕ್ಕೆ ಒಳಗಾಗುವುದು ತಪ್ಪುತ್ತದೆ ಮತ್ತು ಬೆಳವಣಿಗೆಯ ಹಂತಗಳನ್ನು ಸಮರ್ಥವಾಗಿ ನಿಭಾಯಿಸಲು ಶಕ್ತರಾಗುತ್ತಾರೆ ಎಂದು ತಜ್ಞರು ಪ್ರತಿಪಾದಿಸುತ್ತಲೇ ಬಂದಿದ್ದರೂ, ಈ ದಿಸೆಯಲ್ಲಿ ಹೆಚ್ಚಿನ ಪ್ರಗತಿ ಈವರೆಗೂ ಆಗದೇ ಇರುವುದು ದುರದೃಷ್ಟಕರ.


ಈಶ್ವರ್

ಶಾಲಾ ಮಕ್ಕಳ ಬ್ಯಾಗ್ 'ಭಾರ'ದ ಕಾರಣಕ್ಕೆ ಆಗಾಗ್ಗೆ ಸುದ್ದಿ ಆಗುತ್ತಿರುತ್ತದೆ. ತಿಂಗಳಿಗೋ ವಾರಕ್ಕೋ ಒಮ್ಮೆ 'ಬ್ಯಾಗ್‌ರಹಿತ ದಿನ'ವನ್ನು ಆಚರಣೆ ಎಂಬಂತೆ ಸಂಭ್ರಮಿಸುವುದೂ ಇದೆ. ಆದರೆ ಇದೇ ಬ್ಯಾಗ್‌ಗಳಲ್ಲಿ ಕಾಂಡೋಮ್‌ಗಳು, ಗರ್ಭನಿರೋಧಕ ಗುಳಿಗೆ, ಸಿಗರೇಟ್, ನೀರಿನ ಬಾಟಲ್‌ಗಳಲ್ಲಿ ನೀರುಮಿಶ್ರಿತ ಮದ್ಯ... ಇಂಥವುಗಳು ಪತ್ತೆಯಾದರೆ? ಇಂತಹದೊಂದು ವಿದ್ಯಮಾನವು ಈಚೆಗೆ ಬೆಂಗಳೂರಿನಿಂದ ವರದಿಯಾಗಿದೆ. ಸಾರ್ವಜನಿಕ ಚರ್ಚೆಗೂ ಗ್ರಾಸ ಒದಗಿಸಿದೆ.

ಮಕ್ಕಳಿಗೆ ಮೊಬೈಲ್ ಫೋನ್ ಸೆಳೆತ ಎಂತಹುದು ಎಂಬುದು ಹೆಚ್ಚಿನ ಪೋಷಕರಿಗೆ ಅರಿವಾಗಿರುವಂತಹ ಸಂಗತಿ. ಈ ಹಾವಳಿ ಶಿಕ್ಷಕರಿಗೂ ಕಿರಿಕಿರಿ ಉಂಟುಮಾಡಿದೆ. ಶಿಕ್ಷಕರು ನೀಡಿದ ದೂರಿನ ಮೇರೆಗೆ ಕೆಲವು ಖಾಸಗಿ ಶಾಲೆಗಳಲ್ಲಿ ಮೊಬೈಲ್ ಫೋನ್ ಪತ್ತೆಗೆ ಬ್ಯಾಗ್‌ಗಳನ್ನು ತಡಕಾಡಿದಾಗ ಕೈಗೆ ಇಂಥವುಗಳೆಲ್ಲ ಸಿಕ್ಕಿವೆಯಂತೆ. ತಮ್ಮ ಮಗ ಅಥವಾ ಮಗಳ ಬ್ಯಾಗ್‌ನಲ್ಲಿ ಇಂಥದ್ದೇನೋ ಸಿಕ್ಕಿದೆ ಎಂದಾಗ ಪೋಷಕರು ಆಘಾತಕ್ಕೆ ಒಳಗಾಗುವುದು ಮತ್ತು ಮಕ್ಕಳ ವರ್ತನೆಯಲ್ಲಿ ಆಗಿರುವ ಬದಲಾವಣೆಗೆ ಕಳವಳಪಡುವುದು ಸಹಜ. ಆದರೆ, ಆಗಬಾರದ್ದೇನೋ ಆಗಿಬಿಟ್ಟಿದೆ, ಭಾರಿ ಅನಾಹುತ ಸಂಭವಿಸಿದೆ ಎಂಬಂತೆ ಇಂತಹ ವಿದ್ಯಮಾನಗಳನ್ನು ಬಿಂಬಿಸುವ ಅಗತ್ಯ ಇಲ್ಲ. ಮಕ್ಕಳು ತಪ್ಪಿ ನಡೆದರೆ ಅದರ ಹೊಣೆಯನ್ನು ತಂದೆ–ತಾಯಿ, ಶಿಕ್ಷಕರು, ಕೌಟುಂಬಿಕ ವ್ಯವಸ್ಥೆ, ಶಿಕ್ಷಣ ವ್ಯವಸ್ಥೆ ಎಲ್ಲರೂ ಮತ್ತು ಎಲ್ಲವೂ ಹೊರಬೇಕಾಗುತ್ತದೆ. ಬ್ಯಾಗ್ ಶೋಧಿಸುವುದು ಸುಲಭ. ಆದರೆ ಮಕ್ಕಳನ್ನು ಬೆಳೆಸುವಲ್ಲಿ, ಅವರಿಗೆ ಮಾರ್ಗದರ್ಶನ ಮಾಡುವಲ್ಲಿ ಲೋಪ ಆಗಿದೆ ಎನ್ನುವುದಾದರೆ ಆ ವೈಫಲ್ಯಕ್ಕೆ ಕಾರಣಗಳನ್ನು ಪತ್ತೆಹಚ್ಚುವುದು ಕಷ್ಟದ ಕೆಲಸ. ಆ ಕೆಲಸ ಮಾಡಲು ಈ ವಿದ್ಯಮಾನವು ನಮಗೆ ಎಚ್ಚರಿಕೆಯ ಗಂಟೆಯಾಗಬೇಕು.

'ಮಕ್ಕಳ ವರ್ತನೆಯಲ್ಲಿ ದಿಢೀರ್ ಬದಲಾವಣೆ ಆಗಿದೆ' ಎಂದು ಕೆಲವು ಪೋಷಕರು ಆತಂಕ ತೋಡಿಕೊಂಡಿದ್ದಾರೆ ಎಂದು ವರದಿಯಾಗಿದೆ. ಹಾಗಿದ್ದರೆ ಅದಕ್ಕೆ ಕಾರಣ ಏನು? ಕೋವಿಡ್ ಉಲ್ಬಣಿಸಿದ ಸಂದರ್ಭದಲ್ಲಿ ದೀರ್ಘ ಅವಧಿಗೆ ಶಾಲೆಗಳ ಬಾಗಿಲು ಬಂದ್ ಆಗಿತ್ತು. ಆನ್‌ಲೈನ್ ಮೂಲಕ ಪಾಠ ಕೇಳಬೇಕಾದ ಅನಿವಾರ್ಯ ಎದುರಾಗಿದ್ದರಿಂದ ಮೊಬೈಲ್ ಫೋನ್ ಬಳಕೆ ಅನಿವಾರ್ಯವಾಯಿತು. ಮಕ್ಕಳ ಆರೋಗ್ಯ ಮತ್ತು ಅವರ ಒಟ್ಟಾರೆ ಬೆಳವಣಿಗೆ ಮೇಲೆ ಅದು ಬೀರಿರಬಹುದಾದ ಪರಿಣಾಮಗಳ ಬಗೆಗೆ ಅಧ್ಯಯನಗಳ ಅಗತ್ಯವನ್ನು ಇಂತಹ ವಿದ್ಯಮಾನಗಳು ನಮಗೆ ಹೇಳುತ್ತವೆ.

ತಂತ್ರಜ್ಞಾನವು ನಮ್ಮ ಬದುಕಿಗೆ ಅತ್ಯಗತ್ಯ. ಆದರೆ ಅದನ್ನು ಎಷ್ಟು, ಎಲ್ಲಿ ಮತ್ತು ಹೇಗೆ ಬಳಸಿಕೊಳ್ಳಬೇಕು ಎಂಬ ತಿಳಿವಳಿಕೆ ಅಗತ್ಯ. ಮಕ್ಕಳಲ್ಲಿ ಅಂತಹ ತಿಳಿವಳಿಕೆ ಮೂಡಿಸುವುದು ಇಂದಿನ ತುರ್ತು ಅಗತ್ಯ. ಸದ್ಬಳಕೆ ಮಾಡಿಕೊಂಡರೆ ಕಲಿಕೆಗೆ ದೊಡ್ಡ ಮಟ್ಟದಲ್ಲಿ ಸಹಾಯ ಒದಗಿಸುತ್ತದೆ. ದುರ್ಬಳಕೆ ಮಾಡಿಕೊಂಡರೆ ಭವಿಷ್ಯಕ್ಕೆ ಮಾರಕವಾಗಿ ಪರಿಣಮಿಸುತ್ತದೆ. ಈ ವಿಚಾರದಲ್ಲಿ ಮಕ್ಕಳ ಮೇಲೆ ನಿಗಾ ವಹಿಸಬೇಕಾದುದು ಅವಶ್ಯ. ಬಳಕೆಯ ವಿಚಾರದಲ್ಲಿ ಸೂಕ್ತ ಮಾರ್ಗದರ್ಶನವನ್ನೂ ನೀಡಬೇಕು.

ಶಾಲೆಗಳಲ್ಲಿ ಮಕ್ಕಳಿಗೆ ವೈಜ್ಞಾನಿಕ ನೆಲೆಯಲ್ಲಿ ಲೈಂಗಿಕ ಶಿಕ್ಷಣ ನೀಡಬೇಕು ಎಂದು ಶಿಕ್ಷಣ ತಜ್ಞರು, ವೈದ್ಯಕೀಯ ಕ್ಷೇತ್ರದ ಪರಿಣತರು ಅನೇಕ ವರ್ಷಗಳಿಂದ ಒತ್ತಾಯಿಸುತ್ತಲೇ ಬಂದಿದ್ದಾರೆ. ದೈಹಿಕ ಹಾಗೂ ಮಾನಸಿಕ ಬೆಳವಣಿಗೆಗಳನ್ನು ಮಕ್ಕಳಿಗೆ ವೈಜ್ಞಾನಿಕವಾಗಿ ತಿಳಿಹೇಳಿದರೆ ಅವರು ಗೊಂದಲಕ್ಕೆ ಒಳಗಾಗುವುದು ತಪ್ಪುತ್ತದೆ ಮತ್ತು ಬೆಳವಣಿಗೆಯ ಹಂತಗಳನ್ನು ಸಮರ್ಥವಾಗಿ ನಿಭಾಯಿಸಲು ಶಕ್ತರಾಗುತ್ತಾರೆ ಎಂದು ಅವರು ಪ್ರತಿಪಾದಿಸುತ್ತಲೇ ಬಂದಿದ್ದರೂ, ಈ ದಿಸೆಯಲ್ಲಿ ಹೆಚ್ಚಿನ ಪ್ರಗತಿ ಈವರೆಗೂ ಆಗದೇ ಇರುವುದು ದುರದೃಷ್ಟಕರ. ಇಂತಹ ವಿಚಾರಗಳಲ್ಲಿ ಮಡಿವಂತಿಕೆ ಸಲ್ಲದು.

ಪೋಷಕರ ದೈನಂದಿನ ಗಡಿಬಿಡಿ, ಕೆಲಸದ ಒತ್ತಡಗಳು ಏನೇ ಇರಲಿ, ಮಕ್ಕಳಿಗಾಗಿ ಒಂದಷ್ಟು ಸಮಯ ಮೀಸಲಿಡಬೇಕು. ಮಕ್ಕಳ ಮಾತನ್ನು ಆಪ್ತವಾಗಿ, ಪ್ರೀತಿಯಿಂದ, ಸಹನೆಯಿಂದ ಆಲಿಸುವ ವಾತಾವರಣ ಮನೆಯಲ್ಲಿ ಇರುವಂತೆ ನೋಡಿಕೊಳ್ಳಬೇಕು. ಪೋಷಕರ ನಿರೀಕ್ಷೆಗಳ ಭಾರ ಮಕ್ಕಳಿಗೆ ಹೊರೆಯಾಗಿ ಪರಿಣಮಿಸದಂತೆ ನೋಡಿಕೊಳ್ಳುವ ಜವಾಬ್ದಾರಿ ತಂದೆ–ತಾಯಿ ಮೇಲಿದೆ. ಅತಿ ನಿರೀಕ್ಷೆಯ ಪರ್ವತವನ್ನು ಅವರ ಎದುರು ನಿಲ್ಲಿಸುವುದಕ್ಕಿಂತ ಅವರ ಆಸಕ್ತಿ, ಇಷ್ಟಗಳನ್ನು ಅರಿತು ಸ್ಪಂದಿಸುವುದು ಅಪೇಕ್ಷಣೀಯ. ಹಾಗೆಯೇ ಮಕ್ಕಳ ಶಿಕ್ಷಣ ಕ್ರಮ, ಪರೀಕ್ಷಾ ವ್ಯವಸ್ಥೆ, ಅಂಕಗಳಿಗೆ ನೀಡಿರುವ ಪ್ರಾಧಾನ್ಯ... ಈ ಎಲ್ಲದರ ಕುರಿತು ಸಮಾಜ, ಪೋಷಕರು ಹಾಗೂ ಸರ್ಕಾರ ಪುನರ್ ಅವಲೋಕನ ಮಾಡುವ ಅಗತ್ಯವನ್ನು ಇಂತಹ ವಿದ್ಯಮಾನಗಳು ನಮ್ಮ ಎದುರು ತೆರೆದಿಡುತ್ತವೆ.

■ ಎನ್. ಉದಯಕುಮಾರ್